# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಸಿಂದಗಿ

## ಸಿ.ಸಿ.ನಂ.**266/2024**

ಫಿರ್ಯಾದಿಃ ಕರ್ನಾಟಕ ರಾಜ್ಯ (ದೇವರ ಹಿಪ್ಪರಗಿ ಪೊಲೀಸ್ ಠಾಣೆ)

**ವಿರುದ್ಧ**

ಆರೋಪಿಃ

ಸಾಹೇಬಗೌಡ ತಂಃ ಹಣಮಂತ ಕೋಡೆಕಲ್ಲ
ವಯಸ್ಸುಃ 30 ವರ್ಷ, ಉದ್ಯೋಗಃ ಡ್ರೈವರ,
ಸಾಃ ಕೊಕಟನೂರ.

## ಆರೋಪಣೆ

ದಿನಾಂಕ 118.1.2023 ರಂದು ಸಂಜೆ 7-00 ಗಂಟೆ ಸುಮಾರಿಗೆ ದೇವರಹಿಪ್ಪರಗಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ದೇವರ ಹಿಪ್ಪರಗಿ-ಇಂಡಿ ಸಾರ್ವಜನಿಕ ರಸ್ತೆಯ ಮೇಲೆ ಚಿಕ್ಕರೂಗಿಯ ಅಡವಿ ಬಸವಣ್ಣನ ಗುಡಿಯ ಮುಂದೆ ಆರೋಪಿತರಾದ ನೀವು ನಡೆಸುತ್ತಿದ್ದ ಮಿನಿ ಟ್ಯಾಕ್ಟರ್ ನಂಬರ ಕೆ.ಎ:28/ಟಿಇ-7134 ನೇದ್ದನ್ನು ದೇವರ ಹಿಪ್ಪರಗಿ-ಇಂಡಿ ಸಾರ್ವಜನಿಕ ರಸ್ತೆಯ ಮೇಲೆ ಚಿಕ್ಕರೂಗಿ ಕಡೆಯಿಂದ ತಾಂಬಾದ ಕಡೆಗೆ ಚಿಕ್ಕ ರೂಗಿಯ ಅಡವಿ ಬಸವಣ್ಣನ ಗುಡಿಯ ಮುಂದೆ ಅಜಾಗರೂಕತೆಯಿಂದ ಮತ್ತು ನಿಷ್ಕಾಳಜಿತನದಿಂದ ಅಡ್ಡಾದಿಡ್ಡಿಯಾಗಿ ನಡೆಸಿಕೊಂಡು ಹೋಗಿ ತಾಂಬಾದ ಕಡೆಯಿಂದ ನಿವಾಳಖೇಡದ ಕಡೆಗೆ ನಿಮ್ಮ ಮೋಟಾರ್ ಸೈಕಲ್ ನಂ:ಕೆಎ:28/ಎಚ್.ಬಿ-3714 ನೇದ್ದರ ಮೇಲೆ ಬರುತ್ತಿದ್ದ ಫಿಯಾದಿಯ ಗಂಡನಾದ ಶಿವಾನಂದ ತಂದೆ ಕಲ್ಲಪ್ಪ ದಳವಾಯಿ, ಇವರ ಮೋಟಾರ್ ಸೈಕಲ್‌ಕ್ಕೆ ಎದುರಿನಿಂದ ಡಿಕ್ಕಿ ಹಾಯಿಸಿ ಅಪಘಾತಪಡಿಸಿದ್ದಿರಿ ಆ ಮೂಲಕ ಭಾ.ದಂ.ಸಂಹೀತೆ ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ನಡೆಸುತ್ತಿದ್ದ ಮಿನಿ ಟ್ಯಾಕ್ಟರ್ ನಂಬರ

ಕೆ.ಎ:28/ಟಿಇ-7134 ನೇದ್ದನ್ನು ಅಜಾಗರೂಕತೆಯಿಂದ ಮತ್ತು ನಿಷ್ಕಾಳಜಿತನದಿಂದ ಅಡ್ಡಾದಿಡ್ಡಿಯಾಗಿ ನಡೆಸಿಕೊಂಡು ಹೋಗಿ ತಾಂಬಾದ ಕಡೆಯಿಂದ ನಿವಾಳಖೇಡದ ಕಡೆಗೆ ನಿಮ್ಮ ಮೋಟಾರ್ ಸೈಕಲ್ ನಂ:ಕೆಎ:28/ಎಚ್.ಬಿ-3714 ನೇದ್ದರ ಮೇಲೆ ಬರುತ್ತಿದ್ದ ಫಿಯಾದಿಯ ಗಂಡನಾದ ಶಿವಾನಂದ ತಂದೆ ಕಲ್ಲಪ್ಪ ದಳವಾಯಿ, ಇವರ ಮೋಟಾರ್ ಸೈಕಲ್‌ಕ್ಕೆ ಎದುರಿನಿಂದ ಡಿಕ್ಕಿ ಹಾಯಿಸಿ ಅಪಘಾತಪಡಿಸಿದ್ದರಿಂದ ಶಿವಾನಂದ ದಳವಾಯಿ ಇವರು ಭಾರಿ ಗಾಯ-ಪೆಟ್ಟು ಹೊಂದಿ ಸ್ಥಳದಲ್ಲಿಯೇ ಮೃತಪಟ್ಟಿದ್ದು, ಆ ಮೂಲಕ ಭಾ.ದಂ.ಸಂಹಿತೆ ಕಲಂ 304 (ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಮೂರನೇಯದಾಗಿ, ಅದೇ ದಿನ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ನಡೆಸುತ್ತಿದ್ದ ಮಿನಿ ಟ್ರ್ಯಾಕ್ಟರ್ ನಂಬರ ಕೆ.ಎ:28/ಟಿಇ-7134 ನೇದ್ದನ್ನು ಅಜಾಗರೂಕತೆಯಿಂದ ಮತ್ತು ನಿಷ್ಕಾಳಜಿತನದಿಂದ ಅಡ್ಡಾದಿಡ್ಡಿಯಾಗಿ ನಡೆಸಿಕೊಂಡು ಹೋಗಿ ತಾಂಬಾದ ಕಡೆಯಿಂದ ನಿವಾಳಖೇಡದ ಕಡೆಗೆ ನಿಮ್ಮ ಮೋಟಾರ್ ಸೈಕಲ್ ನಂ:ಕೆಎ:28/ಎಚ್.ಬಿ-3714 ನೇದ್ದರ ಮೇಲೆ ಬರುತ್ತಿದ್ದ ಫಿಯಾದಿಯ ಗಂಡನಾದ ಶಿವಾನಂದ ಇವರಿಗೆ ಅಪಘಾತಪಡಿಸಿ ನೀವು ನಿಮ್ಮ ಟ್ರ್ಯಾಕ್ಟರನ್ನು ಘಟನಾ ಸ್ಥಳದಲ್ಲಿ ಬಿಟ್ಟು ಅಪಘಾತದ ಸಂಗತಿಯನ್ನು ಪೊಲೀಸ್ ಠಾಣೆಗೆ ತಿಳಿಸದೇ ಹೋಗಿರುತ್ತೀರಿ. ಹಾಗಾಗಿ ಆರೋಪಿಯಾದ ನೀನು ಮೋಟಾರ್ ವಾಹನ ಕಾಯ್ದೆ ಕಲಂ 187 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ದಿನಾಂಕಃ 18.12.2025 ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸಿಂದಗಿ.

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಸಿಂದಗಿ

ಸಿ.ಸಿ.ನಂ.**266/2024**

ಫಿರ್ಯಾದಿಃ ಕರ್ನಾಟಕ ರಾಜ್ಯ (ದೇವರ ಹಿಪ್ಪರಗಿ ಪೊಲೀಸ್ ಠಾಣೆ)

**ವಿರುದ್ಧ**

ಆರೋಪಿಃ

ಸಾಹೇಬಗೌಡ ತಂಃ ಹಣಮಂತ ಕೋಡೆಕಲ್ಲ
ವಯಸ್ಸುಃ 30 ವರ್ಷ, ಉದ್ಯೋಗಃ ಡ್ರೈವರ,
ಸಾಃ ಕೊಕಟನೂರ.

1. ಮೇಲೆ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೆ?

ಉಃ

2. ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೇ?

ಉಃ

ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆರೋಪವನ್ನು ಓದಿ, ತಿಳಿಸಿ ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಡೀಕರಿಸಿದೆ.

ದಿನಾಂಕಃ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸಿಂದಗಿ.